## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಿರಿಯ ನಾಗರಿಕರ ನೀತಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರದಿಂದ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಮಮಇ 314 ಎಸ್‌ಜೆಡಿ 2003. ದಿನಾಂಕ: 5-9-2003.
2. ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ನಿಅಕಇ/ಯೋಜನೆ/24/2003-2004. ದಿ: 26-3-2004.

### ಪ್ರಸ್ತಾವನೆ:

ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಸಂಯೋಜನಾ ಮಂತ್ರಾಲಯವಾಗಿರುವ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಅಧಿಕಾರಯುಕ್ತ ಮಂತ್ರಾಲಯವು 1999ನೇ ಸಾಲಿಗೆ ವೃದ್ಧರಿಗೆ ರಾಷ್ಟ್ರೀಯ ನೀತಿಯನ್ನು ರೂಪಿಸಿರುತ್ತದೆ. ಈ ನೀತಿಯು ವೃದ್ಧರಿಗೆ ಸಂಬಂಧಿಸಿದ ಕಾಳಜಿಗಳು ರಾಷ್ಟ್ರದ ಕಳಕಳಿಯಾಗಿದ್ದು, ಇವರು ಅಸುರಕ್ಷಿತವಾಗಿರುವುದಿಲ್ಲ ಮತ್ತು ಇವರನ್ನು ಅಲಕ್ಷಿಸಿರುವುದಿಲ್ಲವೆಂಬುದನ್ನು ಭರವಸಿಸುತ್ತದೆ, ಈ ನೀತಿಯಂತೆ ರಾಜ್ಯ ಸರ್ಕಾರವೂ ಸಹ ಕರ್ನಾಟಕ ರಾಜ್ಯ ಹಿರಿಯ ನಾಗರಿಕರಿಗೆ ಕಾರ್ಯ ನೀತಿಯನ್ನು ರೂಪಿಸಿ ಕ್ರಮಾಂಕ (1) ರಲ್ಲಿ ಓದಲಾದಂತೆ ಆದೇಶವನ್ನು ಹೊರಡಿಸಿದೆ. ಸದರಿ ನೀತಿಯ ಮುಖ್ಯ ...ಉ ಹಿರಿಯ ನಾಗರಿಕರ ರಕ್ಷಣೆ ಆರೋಗ್ಯ ಹಾಗೂ ಇತರೆ ಅಗತ್ಯ ಅವಶ್ಯಕತೆಗಳನ್ನು ಗಮನಿಸುವುದಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಶೇ. 7 ರಷ್ಟು ಜನಸಂಖ್ಯೆಯಲ್ಲಿ ಹಿರಿಯ ನಾಗರೀಕರು ಇರುತ್ತಾರೆ. ಹಿರಿಯ ನಾಗರಿಕರ ಕಾರ್ಯ ನೀತಿಯನ್ನು ಅನುಷ್ಠಾನಗೊಳಿಸಲು ಮಾನ್ಯ ಮುಖ್ಯಮಂತ್ರಿಯವರು 2004-2005 ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ಘೋಷಿಸಿರುತ್ತಾರೆ. ಅದರಂತೆ ಅಂಗವಿಕಲರ ಕಲ್ಯಾಣ ಇಲಾಖೆಯಲ್ಲಿ ಒಂದು ಪ್ರತ್ಯೇಕವಾದ ವಿಭಾಗವನ್ನು ಸೃಜಿಸಿ ಇದರ ಅನುಷ್ಠಾನಕ್ಕಾಗಿ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಒದಗಿಸಲು ನಿರ್ಧರಿಸಲಾಗಿದೆ.

ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರು ಮೇಲೆ ಓದಲಾದ ಕ್ರಮಸಂಖ್ಯೆ (2) ದಿನಾಂಕ: 26-3-2004ರ ಪತ್ರದಲ್ಲಿ, ಕರ್ನಾಟಕ ರಾಜ್ಯದಲ್ಲಿ ಹಿರಿಯ ನಾಗರಿಕರಿಗಾಗಿ ರಾಜ್ಯ ನೀತಿಯನ್ನು ಜಾರಿಗೊಳಿಸಿದ. ಸದರಿ ನೀತಿಯನ್ವಯ ಹಿರಿಯ ನಾಗರಿಕರ ರಕ್ಷಣೆ, ಆರೋಗ್ಯ, ಹಾಗೂ ಇತರ ಅಗತ್ಯ ಅವಶ್ಯಕತೆಗಳನ್ನು ಗಮನಿಸುವುದು. ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ಹಿರಿಯ ನಾಗರಿಕರಿಗೆ ಸಮಾಜದ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು ಪ್ರಮುಖ ಉದ್ದೇಶವಾಗಿರುತ್ತದೆ ಹಾಗೂ ಹಿರಿಯ ನಾಗರಿಕರಲ್ಲಿ ಅಡಗಿರುವ ಸಂಪನ್ಮೂಲ ಶಕ್ತಿಯನ್ನು ಉಪಯೋಗಿಸಿಕೊಂಡು ದೇಶದ ಅಭಿವೃದ್ಧಿಗಾಗಿ ಶ್ರಮಿಸುವುದು ಆದ್ಯ ಕರ್ತವ್ಯವಾಗಿರುತ್ತದೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಬೆಂಗಳೂರು, ಬೆಳಗಾಂ, ಹುಬ್ಬಳ್ಳಿ ಮತ್ತು ಧಾರವಾಡ, ಗುಲ್ಬರ್ಗಾ ಜಿಲ್ಲೆಗಳ ನಗರಪಾಲಿಕೆ ವ್ಯಾಪ್ತಿಯಲ್ಲಿ ನಗರಪಾಲಿಕೆ ಸಹಯೋಗದೊಂದಿಗೆ ಹಗಲು ಯೋಗಕ್ಷೇಮ ಕೇಂದ್ರವನ್ನು ಸರ್ಕಾರೇತರ ಸೇವಾ ಸಂಸ್ಥೆಗಳ ಮುಖಾಂತರ ನಡೆಸಲು ಉದ್ದೇಶಿಸಲಾಗಿದ್ದು, 50 ಫಲಾನುಭವಿಗಳಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಲು ಹಗಲು ಯೋಗಕ್ಷೇಮ ಕೇಂದ್ರಗಳನ್ನು ಪ್ರಾರಂಭಿಸಲು ಆದೇಶವನ್ನು ನೀಡಬೇಕೆಂದು ಕೋರಿರುತ್ತಾರೆ. ನಿರ್ದೇಶಕರ ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

### ಸರ್ಕಾರದ ಆದೇಶ ಸಂ: ಮಮಇ 246 ಎಸ್‌ಜೆಡಿ 2004 ಬೆಂಗಳೂರು, ದಿನಾಂಕ: 26-10-2004

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಕರ್ನಾಟಕ ರಾಜ್ಯದ ಬೆಂಗಳೂರು, ಬೆಳಗಾಂ, ಹುಬ್ಬಳ್ಳಿ, ಧಾರವಾಡ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಒಟ್ಟು 4 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಹಿರಿಯ ನಾಗರಿಕರಿಗೆ ಆರೋಗ್ಯ ರಕ್ಷಣೆ ಹಾಗೂ ಇತರೆ ಅಗತ್ಯ ಅವಶ್ಯಕತೆಗಳನ್ನು ಒದಗಿಸುವುದಕ್ಕಾಗಿ ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ. ಪ್ರತಿ ಕೇಂದ್ರವೊಂದಕ್ಕೆ

ವಾರ್ಷಿಕ ರೂ. 5,15,000/- (ಐದು ಲಕ್ಷದ ಹದಿನೈದು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಒಟ್ಟು ರೂ. 20.60 ಲಕ್ಷಗಳ ವೆಚ್ಚದಲ್ಲಿ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.

ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ '2235-02-104-02-04' ಅಡಿ ಭರಿಸತಕ್ಕದ್ದು.

- ಈ ಆದೇಶವನ್ನು ದಿನಾಂಕ: 6-9-2004 ರಂದು ನಡೆದ ಅಧಿಕಾರಯುಕ್ತ ಸಮಿತಿಯು ನೀಡಿದ ಅನುಮೋದನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಪ್ರ.ದ. ಸಿದ್ಧಾಂತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

## ANNEXURE TO GOVERNMENT ORDER NO. WCD 246 SJD 2004
## BANGALORE DATED: 4-12-2004
## DAY CARE CENTRE FOR THE SENIOR CITIZENS

**Introduction:**

The Demographic studies exhibit that the gradual increase of population of elderly persons in India in the recent years. No doubt this may be due to medical advancement improved health services and the improvement in the standard of living.

However, there is a feeling among senior citizens that they are being neglected which leads to frustrations is becoming a problem and is a major concern today. To mitigate the hardship to the elderly persons Government of Karnataka evolved the policy to provide them medical care, shelter, recreation , old age homes and other infrastructures. The main facilities are as follows:

- to provide Day Care Centres throughout the state.
- to provide special medical and geriatric care

The Senior citizens are measure and exploiting their knowledge for the betterment of the country will certainly improve the economy and useful planning.

With regard to Day Care Centres it is absolutely necessary to provide health service facilities and counseling for senior citizens to eradicate the feeling of isolation. He objectives of the Day Care Centres are

- to provide an avenue for dignity and contentment
- to provide need based service and facilities to senior citizens
- to provide support or emotional, social, physical requirements of the senior citizens.
- to provide day care support to the isolated senior citizens
- to provide mental upliftment to the senior citizens along with the health and medical care

**Necessity of the Project:**

In the changing economic scenario the total life style of the present living has been changed vis a vis it changes the life style of the senior citizens too. It is appropriate time that the knowledge and the experience of the senior citizens to utilize by providing new opportunities. The studies by different sectors reveal that the elders want to live with their kith and kins with due freedom and dignity.

The project envisages the following points.

- Health and geriatric medicines, consultation and treatment
- Counseling and debates
- Providing entertainments by cultural activities
- Inviting for social gathering
- Special physical activities along with religious discourses, meditation and yoga
- Encouraging their hobbies
- Skill development leads to productive activities
- Inculcating and educating about nutritional importance and providing nutritional support

**The Project Profile:**

Obviously the project should have an outlay for a period of five years. The resource mobilization should be through NGOs and other voluntary organizations.

**Eligibility for assistance:**

An organization eligible for assistance would be

a) 1) Registered under the Societies, Registration Act 1860 or relevant state societies registration act.

2) A Public Trust registered under any law for time being in force

3) A charitable company licence under section 5.25 of Companies Act 1958

4) Self Help Groups of older persons registered under the Societies registration act 1860 or as Public Trusts.

b) It shall have a properly constituted managing body with its powers, dates and responsibilities clearly defined and laid down by law

c) It shall not run for profit to any individual or body of individuals and

d) A Day Care Centre should have atleast 150 aged persons in their list so that even after dropouts and absenteeism as daily attendance does not fall below 50. Thus a Day Care Centre should run at a strength of 50 aged person.

e) The age group of 60 years and above should benefit from the programme.

To maintain the project recurring and non-recurring expenditure are inevitable. The financial out ay of recurring and non recurring expenditure for one Day Care Centre is here under.

**Recurring Expenditure:**

| | | |
|---|---|---|
| 1. | Honorarium of trained social worker (MSW Graduate preferably specialised in counselling / Social psychiatry) | Rs.5000/- per month |
| 2. | Honorarium of part time medical officer | Rs.250/- per visit of hours 4 visits per month |
| 3. | Honorarium of helper | Rs.2000/- per month |
| 4. | Honorarium to 2 nursing aids (Preferably trained in geriatric care) | Rs.5000/- per month |
| 5. | Rent (B'lore Rs.7000/- p.m. | Rs.5000/- per month other than Bangalore |
| 6. | Magazine, News Papers | Rs.750/- per month |
| 7. | Medicines | Rs.2500/- per month |
| 8. | Refreshment (for 50 beneficiaries Rs.90,000/-) | Rs.5/- per person/day |
| 9. | Contingency (Stationery, Telephone, TA etc.) | Rs.10000/- per annum |

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಿರಿಯ ನಾಗರಿಕರ ನೀತಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರದ ಸಹಾಯವಾಣಿಗಳನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಮಮಇ 314 ಎಸ್‌ಜೆಡಿ 2003. ದಿ: 5-9-2003.

2. ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ನಿಅಕಇ/ಯೋಜನೆ / 24/2003-2004 ದಿ: 26-3-2004.

### ಪ್ರಸ್ತಾವನೆ:

ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಸಂಯೋಜನಾ ಮಂತ್ರಾಲಯವಾಗಿರುವ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಅಧಿಕಾರಯುಕ್ತ ಮಂತ್ರಾಲಯವು 1999ನೇ ಸಾಲಿಗೆ ವೃದ್ಧರಿಗೆ ರಾಷ್ಟ್ರೀಯ ನೀತಿಯನ್ನು ರೂಪಿಸಿರುತ್ತದೆ. ಇವರು ಅನುರಕ್ಷಿತವಾಗಿರುವುದಿಲ್ಲ ಮತ್ತು ಇವರನ್ನು ಅಲಕ್ಷಿಸಿರುವುದಿಲ್ಲವೆಂಬುದನ್ನು ಭರವಸಿಸುತ್ತದೆ. ಈ ನೀತಿಯಂತೆ ರಾಜ್ಯ ಸರ್ಕಾರವೂ ಸಹ ಕರ್ನಾಟಕ ರಾಜ್ಯ ಹಿರಿಯ ನಾಗರಿಕರಿಗೆ ಕಾರ್ಯ ನೀತಿಯನ್ನು ರೂಪಿಸಿ ಉಲ್ಲೇಖಿತ (1)ರ ದಿ: 5-9-2003 ರಂದು ಆದೇಶವನ್ನು ಹೊರಡಿಸಿದೆ. ಸದರಿ ನೀತಿಯ ಮುಖ್ಯ ಉದ್ದೇಶವು ಹಿರಿಯ ನಾಗರಿಕರ ರಕ್ಷಣೆ ಆರೋಗ್ಯ ಹಾಗೂ ಇತರೆ ಅಗತ್ಯ ಅವಶ್ಯಕತೆಗಳನ್ನು ಗಮನಿಸುವುದಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಶೇ. 7 ರಷ್ಟು ಜನಸಂಖ್ಯೆಯಲ್ಲಿ ಹಿರಿಯ ನಾಗರೀಕರು ಇರುತ್ತಾರೆ. ಹಿರಿಯ ನಾಗರಿಕರ ಕಾರ್ಯನೀತಿಯನ್ನು ಅನುಷ್ಠಾನಗೊಳಿಸಲು ಮಾನ್ಯ ಮುಖ್ಯಮಂತ್ರಿಯವರು 2004-2005 ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ಘೋಷಿಸಿರುತ್ತಾರೆ. ಆದರಂತೆ ಅಂಗವಿಕಲರ ಕಲ್ಯಾಣ ಇಲಾಖೆಯಲ್ಲಿ ಒಂದು ಪ್ರತ್ಯೇಕವಾದ ವಿಭಾಗವನ್ನು ಸೃಜಿಸಿ ಇದರ ಅನುಷ್ಠಾನಕ್ಕಾಗಿ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಒದಗಿಸಲು ನಿರ್ಧರಿಸಲಾಗಿದೆ.